# ಸಂವಾದದ ಮೂಲಕ ಸ್ವಾಸ್ಥ್ಯ

ನೂಪುರ್ ರಸ್ತೋಗಿ

ಮಕ್ಕಳಿಗೆ ತರಗತಿಯ ಕಲಿಕಾ ಅನುಭವವು ರಚನಾತ್ಮಕ ಮತ್ತು ಸಕಾರಾತ್ಮಕವಾಗಿಸಲು ಶಿಕ್ಷಕರು ತಮ್ಮ ಶಕ್ತಿಮೀರಿ ಶ್ರಮಿಸುತ್ತಾರೆ. ಸಂಘರ್ಷ ಎದುರಾಗದೇ ಇರುವಂತಹ ಅಂದರೆ, ಸಂಘರ್ಷಕ್ಕೆ ಎಡೆ ಮಾಡಿಕೊಡುವಂತಹ ಯಾವುದೇ ಮಾತುಕತೆಯಲ್ಲಿ ಮಕ್ಕಳು ಪಾಲ್ಗೊಳ್ಳದಂತಹ ವಾತಾವರಣವನ್ನು ಕಲ್ಪಿಸಲು ಪ್ರಯತ್ನಿಸುತ್ತಾರೆ. ಅಹಿತಕರ ವಿಷಯಗಳ ಬಗ್ಗೆ ಚರ್ಚಿಸದಂತೆ ತಡೆಯುವ ಬಗ್ಗೆ ಪರಸ್ಪರ ತಿಳುವಳಿಕೆ ಮೂಡಿಸುವುದನ್ನೂ ಸಹ ಇದು ಒಳಗೊಂಡಿದೆ. ಈ ದೃಷ್ಟಿಕೋನವು ಪ್ರಾಥಮಿಕ ತರಗತಿಗಳಲ್ಲಿ ಆರಂಭವಾಗಿ, ಮಾಧ್ಯಮಿಕ ಶಿಕ್ಷಣ ಪಡೆಯುವ ಹೊತ್ತಿಗೆ ಅವರ ವರ್ತನೆ ಮತ್ತು ಚಿಂತನೆಯಲ್ಲಿ ಪ್ರತಿಫಲನಗೊಳ್ಳುತ್ತದೆ.

ದಮನಿತ ಸಮುದಾಯದವರು ಅಥವಾ ಅವರ ಕುಟುಂಬ ಮತ್ತು ಸಮುದಾಯದ ಸದಸ್ಯರು ದಿನನಿತ್ಯ ಅನುಭವಿಸುವ ಪೂರ್ವಾಗ್ರಹಗಳು, ಆಚರಣೆಗಳು, ನಿಷೇಧಗಳು ಮತ್ತು ತಾರತಮ್ಯಗಳಲ್ಲಿ ಬೇರೂರಿರುವ ತಮ್ಮ ದೈನಂದಿನ ಜೀವನದ ಅನುಭವಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲು ಈ ಸಮುದಾಯದ ಮಕ್ಕಳಿಗೆ ಅವಕಾಶ ಇರುವ ವ್ಯಾಪ್ತಿಯ ಬಗ್ಗೆ ವಿದ್ವಾಂಸರು ಮತ್ತೆ ಮತ್ತೆ ಕಳವಳ ವ್ಯಕ್ತಪಡಿಸಿದ್ದಾರೆ.

ದಮನಿತ ಸಮುದಾಯಗಳ ಮಕ್ಕಳು ತಮ್ಮ ದೈನಂದಿನ ಜೀವನದಲ್ಲಿ ತತ್ತರಿಸಿದ ಅನುಭವಗಳ ಕುರಿತ ಗೊಂದಲಗಳನ್ನು ವ್ಯಕ್ತಪಡಿಸಲು ಅವರಿಗೆ ಸಿಗುವ ಅವಕಾಶದ ಕುರಿತು ಕೂಡಾ ವಿದ್ವಾಂಸರು ಮತ್ತೆ ಮತ್ತೆ ಕಳವಳ ವ್ಯಕ್ತಪಡಿಸುತ್ತಲೇ ಬಂದಿದ್ದಾರೆ. ಯಾಕೆಂದರೆ, ಅವರು ಅಥವಾ ಅವರ ಕುಟುಂಬಗಳ ಮತ್ತು ಸಮುದಾಯದ ಸದಸ್ಯರು ದಿನನಿತ್ಯ ತಾವು ಅನುಭವಿಸುವ ಪೂರ್ವಾಗ್ರಹಗಳು, ಏಕರೂಪತೆ, ಬಹಿಷ್ಕಾರಗಳು ಮತ್ತು ತಾರತಮ್ಯಗಳು ಬೇರೂರಿರುತ್ತವೆ. ಈ ಲೇಖನದಲ್ಲಿ ಮೊದಲಿಗೆ, ಮಕ್ಕಳು ತರಗತಿಯೊಳಗಿನ ಸಂಘರ್ಷಗಳು ಮತ್ತು ಸಮಸ್ಯೆಗಳ ಬಗ್ಗೆ ಮಾತನಾಡಲು ಅವಕಾಶ ಸೃಷ್ಟಿಸುವ ಅಗತ್ಯ, ಎರಡನೆಯದಾಗಿ, ಅಂತಹ ಅವಕಾಶ ಸೃಷ್ಟಿಸುವಲ್ಲಿ ಶಿಕ್ಷಕರು ವಹಿಸಬೇಕಾದ ಪಾತ್ರ ಹಾಗೂ ಅಂತಹ ಅವಕಾಶಗಳ ವಿಭಿನ್ನ ಆಯಾಮಗಳ ಬಗ್ಗೆ ಚರ್ಚಿಸಲಾಗಿದೆ.

## ಸುರಕ್ಷಿತ ಸ್ಥಳಗಳ ನಿರ್ಮಾಣ


ವಿದ್ಯಾರ್ಥಿಗಳಿಗೆ, ತರಗತಿ ಎಂದರೆ ತಮ್ಮ ಅನಿಸಿಕೆಗಳನ್ನು ಯಾವುದೇ ಭಯ, ಬೆದರಿಕೆ ಮತ್ತು ಮುಜುಗರವಿಲ್ಲದೆ ಹಂಚಿಕೊಳ್ಳಬಹುದಾದ ಸುರಕ್ಷಿತ ಸ್ಥಳ ಎಂಬ ಭಾವನೆ ಮೂಡುವುದು ತರಗತಿಯೊಳಗಿನ ಅವರ ಸ್ವಾಸ್ಥ್ಯದ ದೃಷ್ಟಿಯಿಂದ ಅತ್ಯವಶ್ಯ. ಬೇರೆಬೇರೆ ಸಾಮಾಜಿಕ– ಆರ್ಥಿಕ ಹಿನ್ನೆಲೆಯಿಂದ ಬಂದ ವಿದ್ಯಾರ್ಥಿಗಳು ತರಗತಿಯಲ್ಲಿ ಇರುತ್ತಾರೆ. ತರಗತಿಯಲ್ಲಿ ಸುರಕ್ಷಿತ ಅವಕಾಶ ಸೃಷ್ಟಿಸುವುದೆಂದರೆ, ಪ್ರತಿ ವಿದ್ಯಾರ್ಥಿಯೂ ತರಗತಿಯ ಇತರ ಎಲ್ಲಾ ವಿದ್ಯಾರ್ಥಿಗಳ ಜೊತೆ ಗೌರವಯುತವಾಗಿ ಮಾತನಾಡುವುದು, ತಮ್ಮ ಮನೆ ಅಥವಾ ಸಮುದಾಯದಲ್ಲಿ ಕೇಳಿರಬಹುದಾದ ಅವಾಚ್ಯ ಶಬ್ದಗಳನ್ನು ಬಳಸದಿರುವುದು, ಪರಸ್ಪರ ತಾರತಮ್ಯ ಮಾಡದಿರುವುದು ಮತ್ತು ತಮ್ಮ ದೂರುಗಳನ್ನು ಸ್ಪಷ್ಟವಾಗಿ, ಯಾವುದೇ ಮುಜುಗರ, ಆತಂಕವಿಲ್ಲದೆ ವ್ಯಕ್ತಪಡಿಸುತ್ತಾರೆ ಎಂಬುದನ್ನು ಶಿಕ್ಷಕರು ಖಚಿತಪಡಿಸಿಕೊಳ್ಳಬೇಕು. ಇಷ್ಟಾದರೂ ಕೆಲವು ಮಕ್ಕಳಿಗೆ ತರಗತಿಯಲ್ಲಿ ಇಂತಹ ಕಳಂಕಿತ ಅನುಭವಗಳಾಗದೇ ಇದ್ದರೂ ಅವರ ಸಮುದಾಯದಲ್ಲಿ ಆಗಬಹುದು. ಹಾಗೆಯೇ, ಕೆಲವು ಮಕ್ಕಳು ತರಗತಿಯಲ್ಲಿ ಅವಾಚ್ಯ ಶಬ್ದಗಳನ್ನು ಬಳಸದೇ ಇದ್ದರೂ, ಹೆತ್ತವರು ತಮ್ಮ ಮನೆಗಳಲ್ಲಿ ಆ ನಿರ್ದಿಷ್ಟ ಸಮುದಾಯ/ಸಮುದಾಯಗಳ ಬಗ್ಗೆ ಅಂತಹ ಪದಗಳನ್ನು ಬಳಸುವುದನ್ನು ಕೇಳಿರಬಹುದು. ಅಂತಹ ಸಂದರ್ಭಗಳಲ್ಲಿ, ತರಗತಿಯಲ್ಲಿ ಸುರಕ್ಷಿತ ಎಡೆ ಸಿಕ್ಕಿದರೆ ಸಾಲದು. ನಿಷಿದ್ಧವಾಗಿರುವ ಮತ್ತು ವಿದ್ಯಾರ್ಥಿಗಳಿಗೆ ಮುಜುಗರ ಮತ್ತು ಸಂಘರ್ಷಕ್ಕೆ ಎಡೆ ಮಾಡಿಕೊಡುವಂತಹ ಇಂತಹ ವಿಷಯಗಳನ್ನು ಬಹಿರಂಗಪಡಿಸಲು ಏನು ಮಾಡಬೇಕು?

## ನಿರ್ಭೀತ ಸ್ಥಳಗಳು: ಮುಂದಿನ ಹೆಜ್ಜೆ

'ಸುರಕ್ಷಿತ ಸ್ಥಳ' ಅವಕಾಶ ಎನ್ನುವುದು ನಿಯಮಿತ ತರಗತಿಯ ಗುರಿಯಾಗಿದ್ದರೆ, ಭಯಮುಕ್ತ ಅವಕಾಶ ಎಂಬುದು ಶಿಕ್ಷಕರು ನಿಯಮಿತವಾದ ಮಧ್ಯಂತರದಲ್ಲಿ ವಿದ್ಯಾರ್ಥಿಗಳಿಂದ ವಿದ್ಯಾರ್ಥಿಗಳಿಗಾಗಿ ತಮ್ಮ ನಿತ್ಯ ಜೀವನದ ಅನುಭವಗಳ ಬಗ್ಗೆ ಮಾತನಾಡಲು ಸೃಷ್ಟಿಸುವ ಒಂದು ಸ್ಥಳವಾಗುತ್ತದೆ. ಉದಾಹರಣೆಗೆ, ತರಗತಿ ಎಂದರೆ ಎಲ್ಲಾ ಮಕ್ಕಳನ್ನು ಅವರ ಭಿನ್ನತೆಗಳನ್ನು ಲಕ್ಷಿಸದೆ ಎಲ್ಲರನ್ನೂ ಸಮನ್ವಯಗೊಳಿಸುವ 'ಸುರಕ್ಷಿತ ಸ್ಥಳ'ವಾಗಬೇಕು. ಮಕ್ಕಳು ತಪ್ಪುಗಳನ್ನು ಮಾಡುತ್ತಾ ಯಾವುದೇ ತೀರ್ಪು ಇಲ್ಲದೆ ಅವುಗಳಿಂದ ಕಲಿಯುವಂತಹ ವಾತಾವರಣ ನಿರ್ಮಿಸುವಂತಹ ಸ್ಥಳವಾಗಬೇಕು. ಅದು ನಿರ್ಭೀತವಾದ ಮತ್ತು ಬೆಂಬಲದಿಂದ ಕೂಡಿದ ಸ್ಥಳ. ಅದೇ ತರಗತಿಯು, ಕನಿಷ್ಠ ಪಕ್ಷ ಆರಂಭದಲ್ಲಿಯಾದರೂ, ಆವರ್ತನೀಯ ವಿರಾಮಗಳಲ್ಲಿ (ಮಧ್ಯಂತರಗಳಲ್ಲಿ) ಸಮಸ್ಯೆಗಳ ಬಗ್ಗೆ ಮಾತನಾಡುವ 'ನಿರ್ಭೀತ/ಧೈರ್ಯದ ಸ್ಥಳವನ್ನಾಗಿ ರೂಪಿಸಬಹುದು. ಒಂದು ಧೈರ್ಯದ ಸ್ಥಳವು ವಿದ್ಯಾರ್ಥಿಗಳನ್ನು


ಮಾತನಾಡುವಂತೆ ಪ್ರೇರೇಪಿಸಬಲ್ಲದು. ಉದಾಹರಣೆಗೆ, ಜಾತಿಯ ನೆಲೆಯಲ್ಲಿ ಅವರು ಅನುಭವಿಸಿದ ನಿಂದನೆಯ ಶಿಕ್ಷೆ, ಧಾರ್ಮಿಕ ಅಲ್ಪಸಂಖ್ಯಾತರಾದ ಕಾರಣಕ್ಕೆ ಎದುರಿಸಿದ ಭೇದಭಾವ, ಹೆತ್ತವರ ಉದ್ಯೋಗದ ಕಾರಣಕ್ಕಾಗಿ ಅವರು ಅನುಭವಿಸಿದ ತೇಜೋವಧೆ ಮುಂತಾದವುಗಳು. ಅಲ್ಲದೆ, ಆ ಸ್ಥಳವು ಮಕ್ಕಳಿಗೆ ಅಂತಹ ಅನುಭವಗಳ ಬಗ್ಗೆ ಚರ್ಚಿಸಿ, ಅದರ ವಿರುದ್ಧ ಧ್ವನಿಯೆತ್ತಲು ಕಲಿಸಬಲ್ಲದು. ಇದರಿಂದ ಸಮಾಜದ ಅಂಗವಾಗಿ ಇತರ ಸಂಸ್ಕೃತಿಗಳು ಅಥವಾ ಗುಂಪುಗಳ ಕಾರಣಕ್ಕೆ ಅವರು ಅನುಭವಿಸಿದ್ದ ಪಕ್ಷಪಾತ, ಪೂರ್ವಾಗ್ರಹ ಮತ್ತು ಏಕರೂಪತೆಯನ್ನು ತೊಡೆದುಹಾಕಬಲ್ಲದು. ತಮಗೆ ಏನು ಬೇಕು, ಎಷ್ಟು ಬೇಕು ಎಂಬ ಆಯ್ಕೆ ಅಂತಿಮವಾಗಿ ಮಕ್ಕಳದ್ದೇ ಆಗಿರುತ್ತದೆ. ಆದರೆ ಈ ಉಪಕ್ರಮವು ಅಲಕ್ಷಿತ ಸಮುದಾಯಗಳ ಮಕ್ಕಳು ತಮ್ಮ ಅನುಭವಗಳನ್ನು ಇತರರು ಗುರುತಿಸಿ, ಅದರ ವಿರುದ್ಧ ಧ್ವನಿ ಎತ್ತಿ ಪರ್ಯಾಲೋಚನೆ ಮಾಡಲು ನೆರವಾಗುತ್ತದೆ.

ಸಂಕೀರ್ಣ ಸಂಗತಿಗಳು ಪ್ರಾಥಮಿಕ ಶಾಲಾ ಹಂತದ ಮಕ್ಕಳನ್ನೂ ಹೇಗೆ ಬಾಧಿಸುತ್ತವೆ ಎಂಬುದನ್ನು ನಾನು ವಿವರಿಸಲು ಬಯಸುತ್ತೇನೆ. 2015ರಲ್ಲಿ, ಕ್ರಿಸ್ಮಸ್ಗೂ ಮೂರು ದಿನ ಮುಂಚೆ ನಾನು ನಾಲ್ಕನೇ ತರಗತಿಗೆ ಪಾಠ ಮಾಡುತ್ತಿದ್ದೆ. ಶಾಲಾ ಸಂಹಿತೆಯ ಪ್ರಕಾರ ನಿಷಿದ್ಧವಾಗಿದ್ದರೂ, ಕೆಲವು ಅಂಶಗಳ ಬಗ್ಗೆ ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲು ಅವಕಾಶ ಕಲ್ಪಿಸಿಕೊಡಬೇಕು ಎಂದು ನಾನು ನಿರ್ಧರಿಸಿದೆ. ಹಾಗಾಗಿ, ಪತ್ರ ಬರೆಯುವಂತೆ ನಾನು ನನ್ನ ತರಗತಿಯ ಎಲ್ಲ ಮಕ್ಕಳಿಗೆ ಸೂಚಿಸಿದೆ. ಸಾಂತಾ ಉಡುಗೊರೆಗಳನ್ನು ಕೊಡುತ್ತಾನೆ ಎಂಬುದನ್ನು ತಿಳಿದಿದ್ದುದರಿಂದ, ಹೆತ್ತವರಲ್ಲಾಗಲಿ, ಶಿಕ್ಷಕರಲ್ಲಾಗಲಿ ಅಥವಾ ಯಾವುದೇ ವಯಸ್ಕರ ಬಳಿ ಹೇಳಿಕೊಳ್ಳಲಾಗದ, ಆದರೆ ನಮಗೆ ಅತ್ಯಂತ ಬೇಸರವಾಗುವ ಎರಡು ಅಂಶಗಳ ಬಗ್ಗೆ ಮತ್ತು ನಮಗೆ ಅತ್ಯಂತ ಖುಷಿ ನೀಡುವ ಎರಡು ಅಂಶಗಳ ಬಗ್ಗೆ ಯಾಕೆ ಬರೆಯಬಾರದು? ಅವರಲ್ಲಿ ಆಳವಾಗಿ ಮನೆ ಮಾಡಿಕೊಂಡಿದ್ದ


(1) Santa ~~Close~~ Claus please come my ~~par~~ parents for Delhi. And my all family my come to Delhi. My chacha not hiting to me and buaa also not hiting any my father lot of rupees. My father not take a rupee in a udhar please Santa claus.
2) My sister not say a abuse and reading a lot of and my sister is krishna and Radhika Krishna ~~teach~~ is a not class moniter but please krishna is a classmoniter to Santa Claus please my sister ~~not~~ is a work hard She is pass on final exam.
3) And I am also say a ~~to~~ you for my father not drink please Santa clause pleas.
1) My grandfather and grandmother not a die and my grandfather not a money is lost for to is not working and my grandfat new tacter take my grandfather tacter ~~to~~ not xesident.

ಚಿತ್ರ 1 ಎ - ಸಾಂತಾಕ್ಲಾಸ್‌ಗೆ ಒಂದು ಮಗು ಬರೆದ ಪತ್ರ

ಕಳವಳಗಳನ್ನು – ಅಂದರೆ, ತಮ್ಮ ಮನೆಯಲ್ಲಿನ ಬಡತನ, ಕೌಟುಂಬಿಕ ದೌರ್ಜನ್ಯ, ಶಾಲೆ ಬಿಡುವುದು, ಹಿಂಸೆ ಮತ್ತು ನಿಂದನೆ, ಹೆತ್ತವರ ವಿವಾಹೇತರ ಸಂಬಂಧಗಳು ಮತ್ತು ಮನೆಯಲ್ಲಿನ ಲಿಂಗ ತಾರತಮ್ಯವನ್ನು ಹೊರಹಾಕಲು ಈ ಪತ್ರಗಳಿಂದ ಅವಕಾಶವಾಯಿತು. ಆ ದಿನದವರೆಗೂ, ನಾಲ್ಕನೇ ತರಗತಿಯ, 10ರ ಹರೆಯದ ನನ್ನ ಆ ಮಕ್ಕಳಲ್ಲಿ ಅಂತಹ ಭಾವನೆಗಳು ಹುದುಗಿವೆ ಎಂಬುದು ನನಗೆ ಗೊತ್ತಿರಲಿಲ್ಲ. ತಮ್ಮ ಆತಂಕ/ದುಃಖಗಳನ್ನು ಯಾರ ಬಳಿಯೂ ಹೇಳಿಕೊಳ್ಳಲಾಗದ ಕಾರಣದಿಂದ, ನನ್ನ ತರಗತಿಯಲ್ಲಿ ಯಾವುದರ ಕೊರತೆ ಇತ್ತು ಎಂಬುದರ ಬಗ್ಗೆ ನಾನು ಇದರಿಂದ ಯೋಚಿಸುವಂತಾಯಿತು. ಇದರಿಂದ ಅವರ ಒಟ್ಟಾರೆ ಸ್ವಾಸ್ಥ್ಯದ ಮೇಲೆ ಪರಿಣಾಮ ಬೀರಿತೇ? ಅವರು ಅಭ್ಯಾಸ ಮಾಡುವಾಗ, ನಿದ್ರಿಸುವಾಗ ಮತ್ತು ಊಟ ಮಾಡುವಾಗಲೂ ಅದರ ಬಗ್ಗೆಯೇ ಯೋಚಿಸುತ್ತಿದ್ದರೇ? ಅವರು ಅದನ್ನೆಲ್ಲಾ ಹೇಗೆ ನಿಭಾಯಿಸುತ್ತಿದ್ದರು? ಶಾಲೆಯಲ್ಲಿ ಇದನ್ನೆಲ್ಲಾ ಯಾರಾದರೂ ಚರ್ಚಿಸಲು ಆರಂಭಿಸಿದರೆ ಒಂದು ತರಗತಿಯು ಹೇಗೆ ಕಾಣಿಸಬಹುದಿತ್ತು? ಅಂತಹ ಒಂದು ಚರ್ಚೆಯಿಂದ ತಲೆದೋರಬಹುದಾದ ಪರಿಸ್ಥಿತಿಯನ್ನು ನಿಭಾಯಿಸಲು ನಾನು ಸಜ್ಜಾಗಿದ್ದೇನೆಯೇ? ಈ ಸಂಗತಿಗಳ ಬಗ್ಗೆ ಮಾತನಾಡಲು ಮುನ್ನೆಚ್ಚರಿಕೆ ಮತ್ತು ಪೂರ್ವಾಪೇಕ್ಷೆಗಳೇನು? ನಾನು ನನ್ನ ನಿಗದಿತ ಪಠ್ಯವನ್ನು ಯಾವಾಗ ಮುಗಿಸುತ್ತೇನೆ ಮತ್ತು ಪರೀಕ್ಷೆಗಳ ತಯಾರಿ ಇತ್ಯಾದಿಯನ್ನು ಯಾವಾಗ ಮಾಡುತ್ತೇನೆ? ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಯ ಮಿತಿಯೊಳಗೆ ಈ ಎಲ್ಲಾ ಪ್ರಶ್ನೆಗಳು ಬೇರೂರಿದ್ದು, ಇಂತಹ ತರಗತಿಯೊಳಗೆ ಸವಾಲುಗಳನ್ನು ಎದುರಿಸಲು ಯಾರೇ ಆದರೂ ಸೂಕ್ತ ಮಾರ್ಗಗಳನ್ನು ಕಂಡುಕೊಳ್ಳಬೇಕಾಗುತ್ತದೆ. 'ನಿರ್ಭೀತ' ಸ್ಥಳಗಳನ್ನು' (brave spaces) ರೂಪಿಸುವುದೂ ಅಂತಹ ಮಾರ್ಗಗಳಲ್ಲಿ ಒಂದು.


Dear Santa Close

1. The My family is very tension.
2. My family has not money.
3. My Make the house but My family want no money.
4. My family is not crying.
5. The village on the person is die.
6. The poor person, lady, woman, baby I want
gays is rich.
7. I want to my family same gift can the My family is Happy do not sad 1 days also.
8. My Mother father is want to

ಚಿತ್ರ 1 ಬಿ- ಇನ್ನೊಂದು ಮಗು ಸಾಂತಾಕ್ಲಾಸ್‌ಗೆ ಬರೆದ ಪತ್ರ

## ನಿರ್ದಿಷ್ಟ ಅವಧಿಗಳಲ್ಲಿ ನಡೆಯುವ ಸಂವಾದಾತ್ಮಕ ವೃತ್ತಗಳು (Periodic Dialogic Circles)

ಮತ್ತೊಂದು ಪರಿಹಾರವೆಂದರೆ, ನಿಯಮಿತವಾಗಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಒಂದೆಡೆ ಕುಳಿತು ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವಿಚಾರಗಳನ್ನು ಚರ್ಚಿಸುವುದು ಅಂದರೆ ನಿರ್ದಿಷ್ಟ ಅವಧಿಗಳಲ್ಲಿ ನಡೆಯುವ ಸಂವಾದಾತ್ಮಕ ವೃತ್ತಗಳು (ಪಿಡಿಸಿಗಳು). ಈ ಅವಧಿಗಳಲ್ಲಿ ವಿದ್ಯಾರ್ಥಿಗಳ ತಿಳುವಳಿಕೆಯ ಹಕ್ಕು ಹೆಚ್ಚು ಮೌಲ್ಯಯುತವಾಗಿರಬೇಕು, ಹಾಗಾದಾಗ ತಮಗೆ ಹೆಚ್ಚು ಕಾಡುತ್ತಿರುವ ವಿಷಯವನ್ನೇ ಅವರು ಆರಿಸಿಕೊಳ್ಳುತ್ತಾರೆ. ನಿರ್ದಿಷ್ಟ ಅವಧಿಗಳಲ್ಲಿ ನಡೆಯುವ ಸಂವಾದಾತ್ಮಕ ವೃತ್ತದ ಚರ್ಚೆಗಳು 'ನಿರ್ಭೀತ / ಧೈರ್ಯದ ಸ್ಥಳಕ್ಕೆ ಒತ್ತು ನೀಡುವಂತಹ ಮಾತುಕತೆಗಳನ್ನು ಎತ್ತಿಹಿಡಿದು, ಇತರ ಜನರ/ಸಮುದಾಯಗಳ ವಿರುದ್ಧದ ಪೂರ್ವಾಗ್ರಹಗಳನ್ನು ಕಡಿಮೆ ಮಾಡುವಂತಿರಬೇಕು. ನಿರ್ದಿಷ್ಟ ಅವಧಿಗಳಲ್ಲಿ ನಡೆಯುವ ಸಂವಾದಾತ್ಮಕ ವೃತ್ತದ ಚರ್ಚೆಗಳು ಅನುಸರಿಸಬೇಕಾದ ಕೆಲವು ಮುನ್ನೆಚ್ಚರಿಕೆಗಳು ಮತ್ತು ಪೂರ್ವಾಪೇಕ್ಷೆಗಳು ಈ ಕೆಳಗಿನಂತಿವೆ.

### 1. ಪಿಡಿಸಿಗಳಿಗೆ ಯಾವುದೇ ಗುರಿ ಅಥವಾ ಕಾರ್ಯಸೂಚಿಗಳು ಇರುವುದಿಲ್ಲ

ಕಾರ್ಯಸೂಚಿಗಳು ಮುಕ್ತ ಯೋಚನೆಗಳಿಗೆ ತಡೆಬೇಲಿ-ಯಂತಿರುತ್ತವೆ. ಉದಾಹರಣೆಗೆ, 15 ನಿಮಿಷದಲ್ಲಿ ಕತೆಯನ್ನು ಹಂಚಿಕೊಂಡು, ಚರ್ಚೆ ನಡೆಸುವುದು ಇತ್ಯಾದಿ ಮಾಡಿದಾಗ, ವಿದ್ಯಾರ್ಥಿಗಳಿಗೆ ಅದು ಯಾಂತ್ರಿಕವಾಗಿ, ಒಂದು ಗಂಟೆಯಲ್ಲಿ ಆ ಕೆಲಸವನ್ನು ಮುಗಿಸಬೇಕು ಎಂಬಂತಾಗಬಹುದು. ತನ್ನ ವಿಷಯವನ್ನು ಹಂಚಿಕೊಳ್ಳಲು ಮತ್ತು ಮಾತನಾಡಲು ಆರಾಮ ಎನಿಸದ ವಿದ್ಯಾರ್ಥಿಗಳಿಗೆ ಇದರಿಂದ ಒತ್ತಡ ನಿರ್ಮಾಣವಾಗ-ಬಹುದು. ಅದಕ್ಕಿಂತ, ತಮಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ವಿದ್ಯಾರ್ಥಿಗಳು ಮಾತನಾಡಬಹುದು. ಆರಂಭದ ಸಂವಾದಾತ್ಮಕ ವೃತ್ತಗಳಲ್ಲಿ ಅವರು ನೇರವಾಗಿ ಅಥವಾ ತಕ್ಷಣ ವಿಷಯ ಪ್ರಸ್ತಾಪಿಸದೇ ಇರಬಹುದು, ಆದರೆ ಕ್ರಮೇಣ ಹಂಚಿಕೊಳ್ಳ-ಬಹುದು. ಸಂಖ್ಯೆ, ಗುರಿ ಅಥವಾ ಫಲಿತಾಂಶ ಏನು ಎಂಬುದರ ಮೂಲಕ ಸಂವಾದಾತ್ಮಕ ವೃತ್ತಗಳಲ್ಲಿ ಯಶಸ್ಸನ್ನು ಅಳೆಯುವುದಕ್ಕಿಂತ ನಿಧಾನವಾಗಿ, ಹಂತಹಂತವಾಗಿ ಹಂಚಿಕೊಳ್ಳುವ ಪ್ರಕ್ರಿಯೆಯ ಮೂಲಕ ಆಳವಾದ ಚರ್ಚೆಗೆ ಅನುವು ಮಾಡಿ-ಕೊಡುವಂತಿರಬೇಕು. ಸುಗಮಕಾರರು ತಾಳ್ಮೆಯಿಂದಲೂ, ಪರಿಶ್ರಮಪೂರ್ವಕವಾಗಿಯೂ ಇರಬೇಕು.

### 2. ನಿಯಮಿತ ಮಧ್ಯಂತರ/ಅವಧಿಯಲ್ಲಿ ಸಭೆ

ಸಂವಾದಗಳು ನಿಗದಿತ ಮಧ್ಯಂತರಗಳಲ್ಲಿರಬೇಕು ಎಂದು, 'ಆನ್ ಡೈಲಾಗ್' (ON DIALOGUE) ಎಂಬ ಕೃತಿಯಲ್ಲಿ ಲೇಖಕ ಡೇವಿಡ್ ಬೋಹ್ಮ್ ಶಿಫಾರಸ್ಸು ಮಾಡುತ್ತಾರೆ. ಅಂತಹ ಗುಂಪುಗಳು ನಿಗದಿತ ಮಧ್ಯಂತರಗಳಲ್ಲಿ ಭೇಟಿಯಾದರೆ/ಸಭೆ ಸೇರಿದರೆ ಸುಗಮಕಾರರನ್ನು ಅವಲಂಬಿಸುವುದನ್ನು ಅದು ಕಡಿಮೆಗೊಳಿಸುತ್ತದೆ ಅಲ್ಲದೆ, ಭಾಗವಹಿಸುವವರು ಸಂವಾದದಲ್ಲಿ ತೊಡಗಿಸಿಕೊಳ್ಳುವುದನ್ನು ತಮ್ಮ ಪಾಡಿಗೆ ಕಲಿತುಕೊಳ್ಳುತ್ತಾರೆ. ಬಾಹ್ಯ ಬೆಂಬಲವಿಲ್ಲದೆ ಯಾರನ್ನಾದರೂ ಸಂವಾದದಲ್ಲಿ ತೊಡಗಿಸಿಕೊಳ್ಳುವಂತೆ ಬಲವರ್ಧನೆ ಮಾಡಲು ಇದು ಉತ್ತೇಜನಕಾರಿಯಾಗಿರುತ್ತದೆ. ಪ್ರತಿ ಶನಿವಾರ ಬೆಳಗ್ಗೆ ಅಥವಾ ಎರಡು ವಾರಕ್ಕೊಮ್ಮೆ ಎಂಬಂತೆ ಇದನ್ನು ನಿಗದಿಗೊಳಿಸಬಹುದು. ಚಿಂತನೆಗೆ ಹಚ್ಚುವಂತಹ ವಿಷಯಗಳ ಬಗ್ಗೆ ಮಾತನಾಡುವ ಪ್ರಕ್ರಿಯೆಗೆ ಅವರನ್ನು ಉತ್ತೇಜಿಸಲು ಇದೊಂದು ನಿಮಿತ್ತವಾಗಬಹುದು.

### 3. ಸಂವಾದಕ್ಕೆ ಬದಲಿ ವಿಷಯಗಳು

ಸಂವಾದ ಅಥವಾ ಚರ್ಚೆಗೆ ವಿಷಯಗಳನ್ನು ಮಾರ್ಪಡಿಸಬಹುದು. ಅದರಲ್ಲಿ ಗೆಳೆತನ, ಕೋಪ, ಶಿಕ್ಷೆ, ಒಳ್ಳೆಯತನ, ನ್ಯಾಯ, ಧರ್ಮ, ಜಾತಿ, ಲಿಂಗ ಅಥವಾ ದೈಹಿಕ ಚಿತ್ರಣ ಒಳಗೊಳ್ಳಬಹುದು. ಮಕ್ಕಳು, ವಿಶೇಷವಾಗಿ ದಮನಿತ ಸಮುದಾಯಗಳ ಮಕ್ಕಳು, ಹೇಗೆ ಮತ್ತು ಯಾವ ವಿಷಯವನ್ನು ಹಂಚಿಕೊಳ್ಳುತ್ತಾರೆ ಎಂಬುದರ ಮೇಲೆ ಸಾಮಾಜಿಕ ನೆಲೆಯು (ವಾಸಸ್ಥಾನ) ಪ್ರಭಾವ ಬೀರದಂತೆ (ಅಥವಾ ಬೆದರಿಸದಂತೆ) ಎಚ್ಚರ ವಹಿಸುವಷ್ಟು ಸುಗಮಕಾರರು ಗಟ್ಟಿಯಾಗಿ ಮತ್ತು ಅಚಲವಾಗಿರಬೇಕು. ಈ ವೃತ್ತದ ಮೇಲೆ ನಿಯಂತ್ರಣ ಹೇರುವ ವ್ಯಕ್ತಿಯಾಗದಂತೆ ಸುಗಮಕಾರರು ಎಚ್ಚರ ವಹಿಸಬೇಕು ಹಾಗೂ ಹಿನ್ನೆಲೆಯಿಂದಲೇ ಯಾವಾಗ ಮುನ್ನಡೆಸಬೇಕು ಎಂಬುದನ್ನು ಅರಿತುಕೊಂಡಿರಬೇಕು.

### 4. ವೈವಿಧ್ಯತೆಗಾಗಿ ದೊಡ್ಡ ಗುಂಪುಗಳು

ಗುಂಪಿನಲ್ಲಿ ವೈವಿಧ್ಯಮಯ ಯೋಚನೆಗಳನ್ನು ಹಂಚಿಕೊಳ್ಳುವ ಸಲುವಾಗಿ ಸುಮಾರು 20 ಮಂದಿಯ ದೊಡ್ಡ ಗುಂಪನ್ನು ರಚಿಸಬೇಕು. 40 ವಿದ್ಯಾರ್ಥಿಗಳು ಇರುವ ಒಂದು ತರಗತಿಯಲ್ಲಿ ತಲಾ 20 ವಿದ್ಯಾರ್ಥಿಗಳ ಎರಡು ಗುಂಪುಗಳನ್ನು ಸುಗಮಕಾರರು ಮಾಡಬಹುದು. ಇದನ್ನೂ ತರಗತಿಯ ಸನ್ನಿವೇಶಕ್ಕೆ ಮತ್ತು ಲಭ್ಯ ಸಂಪನ್ಮೂಲಗಳಿಗೆ ಅನುಗುಣವಾಗಿ ನಿರ್ಧರಿಸಬಹುದು. ಉದಾಹರಣೆಗೆ, ಒಂದು ಗುಂಪನ್ನು ಮಾಡುವಷ್ಟೂ ಸ್ಥಳಾವಕಾಶ ತರಗತಿಯಲ್ಲಿ ಇಲ್ಲದೇ ಇದ್ದರೆ ಅಥವಾ ಶಾಲೆಯಲ್ಲಿ ಶಿಕ್ಷಕರ ಕೊರತೆ ಇದ್ದಲ್ಲಿ ತರಗತಿಯಲ್ಲಿ ಎರಡು ಪಿಡಿಸಿಗಳನ್ನು ರಚಿಸಲು ಅವಕಾಶವಾಗದಿರಬಹುದು. ಅಂತಹ ಸನ್ನಿವೇಶಗಳಲ್ಲಿ, ವಿದ್ಯಾರ್ಥಿಗಳ ಗುಂಪುಗಳನ್ನು ಬೆಳಗ್ಗೆ ಬೇಗನೆ ಶಾಲೆಗೆ ಬರಲು ಹೇಳಬೇಕಾಗುತ್ತದೆ ಅಥವಾ ಶಾಲಾ ಅವಧಿಯ ನಂತರ ಒಂದು ಗಂಟೆ ಉಳಿದುಕೊಳ್ಳುವಂತೆ ಹೇಳಬೇಕಾಗುತ್ತದೆ.

### 5. ಸಕ್ರಿಯ ಆಲಿಸುವಿಕೆಯೂ ಒಂದು ಪೂರ್ವ ಷರತ್ತು

'ಸಕ್ರಿಯವಾಗಿ ಆಲಿಸುವುದು' ('active listening') ಕೂಡಾ ಸಂವಹನದ ಒಂದು ಮಾರ್ಗವಾಗಿದ್ದು, ಪಿಡಿಸಿಗಳಲ್ಲಿ ಮಹತ್ವದ ಪೂರ್ವ ಷರತ್ತುಗಳಲ್ಲೊಂದಾಗಿದೆ. ಮಾತನಾಡಲು ಮಾತ್ರ

ಅವಕಾಶವಿದ್ದು, ಯಾರೂ ಕೇಳಿಸಿಕೊಳ್ಳುವವರು ಇಲ್ಲದಿದ್ದರೆ ಯಾವುದೇ ಪಿಡಿಸಿ ಯಶಸ್ವಿಯಾಗದು. ಅಭಿಪ್ರಾಯ/ಅನಿಸಿಕೆಗಳನ್ನು ಹಂಚಿಕೊಳ್ಳುವುದೆಂದರೆ, ಅರ್ಥ– ಮಾಡಿಸುವ ಪ್ರಕ್ರಿಯೆಯಾಗಿದ್ದು, ಒಬ್ಬರು ಹೇಳುವುದನ್ನು ಇನ್ನೊಬ್ಬರು ಕೇಳಿಸಿಕೊಳ್ಳದೇ ಇದ್ದರೆ ಅದು ವಿಫಲವಾಗುತ್ತದೆ. ಸಕ್ರಿಯವಾಗಿ ಆಲಿಸುವುದು ಎಂದರೆ, ಮಾತನಾಡುತ್ತಿರುವ ವ್ಯಕ್ತಿಗೆ ಗೌರವ ಕೊಡುವ ಮೂಲಕ, ತಾವು ಹೇಳುತ್ತಿರುವ ವಿಷಯಗಳ ಬಗ್ಗೆ ಬೇರೆಯವರು ಆಸಕ್ತಿ ತೋರುತ್ತಿದ್ದಾರೆ ಎಂದು ವ್ಯಕ್ತಪಡಿಸುವುದು. ಪ್ರಾಥಮಿಕ ಶಾಲೆಯ ತರಗತಿಯೊಂದರಲ್ಲಿ, ಸಕ್ರಿಯವಾಗಿ ಆಲಿಸುವ ಕೌಶಲವು ಇತರ ವ್ಯಕ್ತಿ ಏನು ಹೇಳುತ್ತಿದ್ದಾರೆ ಎಂಬುದರತ್ತ ಗಮನ ಹರಿಸುವುದು ಮತ್ತು ಅವರಿಗೆ ಗೌರವ ತೋರಿಸುವುದು ಎಂದು ಅರ್ಥ ಮಾಡಿಕೊಳ್ಳಬಹುದು.

## 6. ಶಿಕ್ಷಕರೇ ಸುಗಮಕಾರರಾಗಿ

ಶಿಕ್ಷಕರು ವಿದ್ಯಾರ್ಥಿಗಳನ್ನು ನಿಯಮಿತವಾಗಿ ಭೇಟಿಯಾಗುವ ಕಾರಣ ಅವರನ್ನು ಚೆನ್ನಾಗಿ ಅರಿತುಕೊಂಡಿರುತ್ತಾರೆ. ಸಮುದಾಯವನ್ನೂ ಅಷ್ಟೇ ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು ಎಂದು ಅಪೇಕ್ಷಿಸಲಾಗುತ್ತದೆ. ತರಗತಿಯನ್ನು ಸುರಕ್ಷಿತ ಸ್ಥಳವಾಗಿ ಹೊರಹೊಮ್ಮಿಸುವ ಹೊಣೆ ಶಿಕ್ಷಕಿಯದ್ದಾಗಿರುತ್ತದೆ. ಅವರು ವಿದ್ಯಾರ್ಥಿಗಳಿಗೆ ಅಧಿಕಾರಯುತ ವ್ಯಕ್ತಿಯೂ ಆಗಿರುತ್ತಾರೆ. ಸುಗಮಕಾರರಾಗಿ, ತರಗತಿಯನ್ನು ನಿರ್ಭೀತ ಸ್ಥಳವಾಗಿ ಮಾರ್ಪಡಿಸುವ ಮಹತ್ವದ ಹೊಣೆಯೂ ಅವರದ್ದು. ಸುಗಮಕಾರರ ಜವಾಬ್ದಾರಿ ವಹಿಸಿಕೊಳ್ಳುವುದೆಂದರೆ, ತಾನು ಅಧಿಕಾರಯುತ ವ್ಯಕ್ತಿ ಎಂಬ ಹೆಚ್ಚುವರಿ ಪ್ರಜ್ಞೆಯೂ ಅವರಲ್ಲಿ ಜಾಗೃತವಾಗುತ್ತದೆ. ಒಬ್ಬ ಸುಗಮಕಾರರಾಗಿ, ಗುಂಪನ್ನು ನಿಯಂತ್ರಿಸಬೇಕೆಂದಿಲ್ಲ ಅಥವಾ ಪ್ರತಿಯೊಬ್ಬ ವಿದ್ಯಾರ್ಥಿಯೂ ನಿರ್ದಿಷ್ಟ ರೀತಿಯಲ್ಲೇ ವರ್ತಿಸಬೇಕು ಎಂದು ನಿರೀಕ್ಷಿಸಬೇಕಾಗಿಲ್ಲ. ಅವರಿಗೆ ಯಾವುದೇ ಕೆಲಸಗಳನ್ನು ವಹಿಸುವುದಾಗಲೀ, ನಿರೀಕ್ಷೆಗಳನ್ನು ಇಟ್ಟುಕೊಳ್ಳುವುದಾಗಲೀ ಅಲ್ಲ. ವೈವಿಧ್ಯಮಯ ದೃಷ್ಟಿಕೋನಗಳಿಗೆ ಆಕೆ ಮುಕ್ತವಾಗಿರಬೇಕು, ಮುಕ್ತವಾದ ಚರ್ಚೆಗೆ ಇನ್ನಷ್ಟು ವೇಗವರ್ಧಕದಂತೆ ವರ್ತಿಸಬೇಕು ಮತ್ತು ಚರ್ಚೆಯಲ್ಲಿ ಮಧ್ಯಪ್ರವೇಶಿಸುವ ಅಥವಾ ಸರಿಪಡಿಸುವ ಪ್ರಚೋದನೆಗಳನ್ನು ತಡೆಯುವಂತಿರಬೇಕು. ಉದಾಹರಣೆಗೆ, ಅನುಸರಣಾ ಸಭೆಯಲ್ಲಿ, ಸ್ವಯಂ ಪರ್ಯಾಲೋಚನಾ ಅವಧಿ/ಗೋಷ್ಠಿಯಲ್ಲಿ (self-level-reflection session) ಅವರ ಪಾತ್ರವೇನೆಂದರೆ, 'ನನ್ನ ಅನಿಸಿಕೆಯನ್ನು ಹಂಚಿಕೊಂಡ ನಂತರ ನನಗೆ ಹೇಗನ್ನಿಸುತ್ತಿದೆ? ಬೇರೆಯವರ ಮಾತನ್ನು ಆಲಿಸುವಾಗ ನನಗೆ ಏನು ಅನಿಸಿತು? ನಾನು ಏನು ಯೋಚಿಸುತ್ತಿದ್ದೆ? ಎಂಬ ಅಂಶಗಳ ಬಗ್ಗೆ ವಿದ್ಯಾರ್ಥಿಗಳು ಗಮನಹರಿಸುವಂತೆ ಉತ್ತೇಜಿಸುವುದು. ಇದರಿಂದಾಗಿ, ಆ ಗೋಷ್ಠಿಯಲ್ಲಿ ವಿದ್ಯಾರ್ಥಿಗಳು ತಮ್ಮ ಅನುಭವಗಳನ್ನು ಕ್ರೋಢೀಕರಿಸಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ಚರ್ಚೆಗೆ ಸಿದ್ಧರಾಗಿದ್ದಾರೆ ಮತ್ತು ಯಾವುದೇ ನಿರ್ಣಯಾತ್ಮಕ ಹೇಳಿಕೆಗಳನ್ನು ಅವರು ನೀಡದಂತೆ ಎಚ್ಚರಿಕೆ ವಹಿಸುವುದು ಸುಗಮಕಾರರ ಕೆಲಸ.

## 7. ಉತ್ತೇಜನ ಮುಖ್ಯ

ಜೋ ಆನ್ನಾ ಹೇಯ್ಸ್, ಚಿಲ್ಡ್ರನ್ ತ್ಯಾಸ್ ಫಿಲಾಸಫರ್ಸ್: ಲರ್ನಿಂಗ್ ಥ್ರೂ ಇನ್‌ಕ್ವೈರಿ ಅಂಡ್ ಡೈಲಾಗ್ (Children as Philosophers: Learning through Inquiry and Dialogue) ಎಂಬ ತನ್ನ ಪುಸ್ತಕದಲ್ಲಿ ದಂತಕತೆಯೊಂದನ್ನು ಹಂಚಿಕೊಂಡಿದ್ದಾರೆ. ಅದು ಬಹುಶಃ ನಮಗೆ ಇಲ್ಲಿ ನೆರವಾದೀತು. ಆಕೆ ಬರೆಯುತ್ತಾರೆ: 'ಪುಟಾಣಿಗಳ ತರಗತಿಯೊಂದರಲ್ಲಿ ಒಂದು ಅವಧಿಯ ಕೆಲಸಗಳು ಪೂರ್ಣಗೊಂಡು ಪುನರಾವಲೋಕನ ನಡೆಯುತ್ತಿರುವಾಗ, ಏಳು ವರ್ಷದ ಮಗುವೊಂದು, 'ನಾನು ತತ್ವಶಾಸ್ತ್ರವನ್ನು ಬಹಳ ಆನಂದಿಸಿದೆ. ಆದರೆ ಕ್ಯಾಥರಿನ್ ಏನು ಯೋಚಿಸುತ್ತಿದ್ದಾಳೆ ಎಂದು ತಿಳಿದುಕೊಳ್ಳಲು ನಾನು ಇಚ್ಛಿಸುತ್ತೇನೆ' ಎಂದು ಹೇಳಿತು. ಕ್ಯಾಥರಿನ್ ಗುಂಪಿನಲ್ಲಿ ಮಾತನಾಡುವುದೇ ಕಡಿಮೆ, ಹಾಗೆಯೇ ಇತರರೂ ಅದೇ ಅಭಿಪ್ರಾಯ ವ್ಯಕ್ತಪಡಿಸಿದರು. ತನ್ನ ಸಹಪಾಠಿಗಳಿಂದ ವ್ಯಕ್ತವಾದ ಈ ಪ್ರತಿಕ್ರಿಯೆಗಳಿಂದಾಗಿ, ತನ್ನ ಸ್ನೇಹಿತರೆಲ್ಲರೂ ತನ್ನ ಅನಿಸಿಕೆಗಾಗಿ ಕಾಯುತ್ತಿರುವುದಾಗಿಯೂ, ತನ್ನ ಬಗ್ಗೆ ಅವರಿಗೆ ಇರುವ ಕುತೂಹಲ ಅವಳಲ್ಲಿ ಹೊಸ ಪ್ರೇರಣೆ ತುಂಬಿ ತನ್ನ ಅನಿಸಿಕೆಗಳನ್ನು ಹೇಳಿಕೊಳ್ಳುವಂತೆ ಮಾಡಿತು.' ಎಷ್ಟೋ ಸಲ, ವಿದ್ಯಾರ್ಥಿಗಳು ಬಾಯಿ ಬಿಡುವುದಿಲ್ಲ ಮತ್ತು ಅವರ ಹಿಂಜರಿಕೆಯನ್ನು, ಅವರಿಗೆ ಅನಿಸಿಕೆ ಹಂಚಿಕೊಳ್ಳಲು ಇಷ್ಟವಿಲ್ಲ ಎಂದು ಯಾರಾದರೂ ಭಾವಿಸುವಂತೆ ಮಾಡುತ್ತದೆ. ಅಂತಹ ಸಂದರ್ಭಗಳಲ್ಲಿ, ಸುಗಮಕಾರರು ಮತ್ತು ಸಹಪಾಠಿಗಳ ಪ್ರೇರೇಪಣೆ ಸಹಕಾರಿಯಾಗುತ್ತದೆ. ಒಬ್ಬ ವಿದ್ಯಾರ್ಥಿಯು ತನ್ನ ಆತ್ಮಗೌರವದ ಕಾರಣದಿಂದ ತನ್ನ ಅನಿಸಿಕೆಗಳನ್ನು ಹಂಚಿಕೊಳ್ಳದೇ ಇರಬಹುದು ಅಥವಾ ಅವಳು ಅಥವಾ ಅವನು ಹೆದರಿರಬಹುದು ಅಥವಾ ಅವನಿಗೆ ಅಥವಾ ಅವಳಿಗೆ ತನ್ನ ಅನಿಸಿಕೆಗಳು ಹಂಚಿಕೊಳ್ಳಲು ಯೋಗ್ಯವಾದವುಗಳಲ್ಲ ಎಂದು ಅನಿಸಿರಬಹುದು. ಆಗ, ಅವರು ತಮ್ಮ ಸಹಪಾಠಿಗಳೊಂದಿಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುವಂತಹ ಉತ್ತೇಜನದ ವಾತಾವರಣವನ್ನು ಸುಗಮಕಾರರೇ ಸೃಷ್ಟಿಸಬೇಕು.

## ಒಮ್ಮತ ಇಲ್ಲವೇ ನಿರ್ಣಯ

ಚರ್ಚೆಯ ಪ್ರಕ್ರಿಯೆ ಎಂದಾಕ್ಷಣ ಅದು ಸಂಘರ್ಷ–ನಿರ್ಣಯ (conflict-resolution) ಮಾಡುವ ಪ್ರಕ್ರಿಯೆ ಎಂದು ತಪ್ಪಾಗಿ ಪರಿಭಾವಿಸಬೇಕಾಗಿಲ್ಲ. ಎಲ್ಲಾ ವಿದ್ಯಾರ್ಥಿಗಳು ಒಂದೇ ನೆಲೆಗಟ್ಟಿನಲ್ಲಿ ಬರುತ್ತಾರೆ ಎಂದಾಗಲೀ, ಪರಸ್ಪರ ಸಮ್ಮತಿಸುತ್ತಾರೆ ಎಂದಾಗಲೀ ಅಲ್ಲ. ಪಿಡಿಸಿಗಳು ಒಂದು ಪ್ರಕ್ರಿಯೆಯಾಗಿ ರೂಪುಗೊಳ್ಳುತ್ತವೆ. ಅಂತಹ ಎಲ್ಲ ಒಮ್ಮತ ಮೂಡಿಸುವುದು (consensus-building), ಸಂಘರ್ಷ– ನಿರ್ಣಯ ಮಾಡುವುದು ಮತ್ತು ಸಮಸ್ಯೆ ಬಗೆಹರಿಸುವುದು ಸಾಧ್ಯವಿದ್ದು, ಪ್ರಕ್ರಿಯೆಯ ಭಾಗವಾಗಿ ಪರಿಣಮಿಸಬಹುದು ಇಲ್ಲವೇ ಪರಿಣಮಿಸದೇ ಇರಬಹುದು. ಆದರೆ ಯಾವುದೇ ಕಾರಣಕ್ಕೂ ಅದೊಂದು ಪರಿಹಾರವಲ್ಲ.

## ಮೂರನೇ-ವ್ಯಕ್ತಿಯ ವಸ್ತುವಿನ ಮೂಲಕ ವೇದಿಕೆಯನ್ನು ನಿರ್ಮಿಸುವುದು

ಆರಂಭದ ಕೆಲವು ಪಿಡಿಸಿಗಳಲ್ಲಿ ವಿದ್ಯಾರ್ಥಿಗಳಿಗೆ ಅಥವಾ ಸುಗಮಕಾರರಿಗೆ ಮುಕ್ತವಾಗಿ ಮಾತನಾಡಲು ಅಥವಾ ಸಂವಾದವನ್ನು ಆರಂಭಿಸಲು ಕಷ್ಟವಾದೀತು. ಆಗ ಸುಗಮಕಾರರು ಸಂವಾದ ಆರಂಭಿಸಲು ಮೂರನೇ ವ್ಯಕ್ತಿಯ ವಸ್ತುವಿನ ನೆರವು ಪಡೆಯಬಹುದು. ಉದಾಹರಣೆಗೆ, ಸುಗಮಕಾರರು ಒಂದು ಕತೆಯನ್ನು ಇಲ್ಲವೇ ದಿನಪತ್ರಿಕೆಯ ವರದಿಯೊಂದನ್ನು ಓದಬಹುದು. ಕಲಾಕೃತಿಗಳು, ಸಿನಿಮಾಗಳು, ಸಾಕ್ಷ್ಯಚಿತ್ರಗಳು ಮತ್ತು ಛಾಯಾಚಿತ್ರಗಳನ್ನೂ ಅವರು ಪ್ರದರ್ಶಿಸಬಹುದು, ಸಂಗೀತ ಹಾಕಬಹುದು ಅಥವಾ ವಿದ್ಯಾರ್ಥಿಗಳ ಬದುಕಿಗೆ ಹತ್ತಿರವಾಗುವಂತಹ ತಮ್ಮದೇ ಯಾವುದಾದರೂ ಅನುಭವವನ್ನು ಹಂಚಿಕೊಳ್ಳಬಹುದು. ಹೇಳಿಕೊಳ್ಳಲು ಇಚ್ಛಿಸದ ತಮ್ಮ ಖಾಸಗಿ ವಿಷಯಗಳನ್ನು ಮತ್ತು ಗುರುತುಗಳನ್ನು ಪ್ರಸ್ತಾಪಿಸದೆಯೇ ಮತ್ತು ತಮ್ಮ ಕಲ್ಪನೆಯ ಆಧಾರದಲ್ಲಿ ಸಂವಾದದಲ್ಲಿ ಭಾಗಿಯಾಗಲು ಈ ಮೂರನೇ ಅಂಶಗಳು ವಿದ್ಯಾರ್ಥಿಗಳಿಗೆ ವೇದಿಕೆಯನ್ನು ಒದಗಿಸುತ್ತವೆ.

## ಸಂವಾದಾತ್ಮಕವೃತ್ತಗಳಿಗೆ ಸಲಹೆಗಳು

ಪ್ರಾಥಮಿಕ ತರಗತಿಯ ಮಕ್ಕಳ ವಯಸ್ಸು ಕೂಡಾ, ಸುಗಮಕಾರರು ಬಳಸಬಹುದಾದ ತೃತೀಯ ಅಂಶಗಳನ್ನು ನಿರ್ಣಯಿಸುತ್ತವೆ. ಅಂತಹ ಕೆಲವು ಮಾದರಿಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.



**ಚಿತ್ರ 2. ಸಂವಾದಾತ್ಮಕ ವೃತ್ತದ ಕಾಲ್ಪನಿಕ ಮೂಲ ಚಿತ್ರಣ**

## ಪ್ರಾಥಮಿಕ ತರಗತಿ ಕೊಠಡಿ - ವಯೋಮಾನ 6-9

ಪ್ರೊಫೆಸರ್ ಹೈಡ್ ಲೆಗಾಂಗರ್– ಕ್ರಾಗ್‌ಸ್ಟಾಡ್ ಅವರು ಕತೆಗಳನ್ನು ಬಳಸಿಕೊಳ್ಳುವಂತೆ ಸಲಹೆ ನೀಡುತ್ತಾರೆ. ಈ ವಯಸ್ಸಿನ ಮಕ್ಕಳಿಗೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿ ಅವರ ಕಲ್ಪನೆಯಲ್ಲಿ ಅರ್ಥ ಮಾಡಿಕೊಂಡಿರುವುದನ್ನು ಮುಂದುವರಿಸುವಂತೆ ಹೇಳಬಹುದು.

- ಈ ಕತೆಯಲ್ಲಿ ನೀವು ಯಾರಾಗಲು ಬಯಸುತ್ತೀರಿ?
- ಎಕ್ಸ್ ಮತ್ತು ವೈ  ಎಂಬ ವ್ಯಕ್ತಿಗಳು ಕತೆಯಲ್ಲಿ ಬಂದಂತೆ ಯಾಕೆ ನಟಿಸಿದರು?
- ನಟಿಸುವ ಮೊದಲು ಮತ್ತು ನಟಿಸಿದ ನಂತರ ಅವರು ಏನು ಭಾವಿಸಿರಬಹುದು?
- ಹೀಗಾಗಿದ್ದರೆ (….) ಏನಾಗುತ್ತಿತ್ತು?
- ನೀನೇ ಎಕ್ಸ್ ಆಗಿರುತ್ತಿದ್ದರೆ ನೀನೇನು ಮಾಡುತ್ತಿದ್ದೆ?

ಉದಾಹರಣೆಗೆ, 'ಭೀಮರಾವ್ ಅಂಬೇಡ್ಕರ್: ದಿ ಬಾಯ್ ಹೂ ಆಸ್ಕ್ಡ್ ವೈ' (Bhimrao Ambedkar: The Boy Who Asked Why) ಪುಸ್ತಕವು, ತನ್ನ ದೈನಂದಿನ ಅನುಭವಗಳಲ್ಲಿ ಜಾತಿ ನಿಂದನೆಯ ಬಗ್ಗೆ ಪ್ರಶ್ನೆಗಳನ್ನು ಎತ್ತಿದ್ದ ಒಬ್ಬ ಹುಡುಗನ ಕುರಿತಾಗಿದೆ. ಆರಂಭಿಕ ಪಿಡಿಸಿಗಳಿಗೆ, ಸುಗಮಕಾರರು ಅಂತಹ ಕತೆಗಳನ್ನು ಬಳಸಬಹುದು ಮತ್ತು ಜೋರಾಗಿ ಓದುವ ಮೂಲಕ ಮಕ್ಕಳನ್ನು ಚರ್ಚೆಯಲ್ಲಿ ಪಾಲ್ಗೊಳ್ಳುವಂತೆ ಮಾಡಿ, ಅದರ ಮೇಲೆ ಪ್ರಶ್ನೆಗಳನ್ನು ಕೇಳಬಹುದು. ಹೀಗೆ, ಮಕ್ಕಳ ವೈಯಕ್ತಿಕ ಕತೆಗಳನ್ನು ಚರ್ಚಿಸದೆಯೇ ಮಕ್ಕಳಿಗಾಗಿ ಸಾಮಾನ್ಯ ಚರ್ಚೆಯ ಅವಕಾಶವೊಂದನ್ನು ಸೃಷ್ಟಿಸಬಹುದು.

## ಪ್ರಾಥಮಿಕ ತರಗತಿ ಕೊಠಡಿ – ವಯೋಮಾನ 10ರಿಂದ 13

ಪ್ರೊಫೆಸರ್ ಹೈಡ್‌ಲೆಗಾಂಗರ್–ಕ್ರಾಗ್‌ಸ್ಟಾಡ್ ಅವರ ಪ್ರಕಾರ, ಮಕ್ಕಳು ಈ ವಯೋಮಾನದಲ್ಲಿ ವಾಸ್ತವಿಕ ಜ್ಞಾನದ ಬಗ್ಗೆ ಆಸಕ್ತರಾಗಿರುತ್ತಾರೆ. ತಾವು ಹೊಂದಿರುವ ಮಾಹಿತಿಯನ್ನು ವ್ಯವಸ್ಥೆಗಳು ಮತ್ತು ರಚನೆಗಳಲ್ಲಿ ಸಂಯೋಜಿಸುವ ಅವಶ್ಯಕತೆಯನ್ನು ಅವರು ಎದುರು ನೋಡುತ್ತಾರೆ. ಈ ಅವಶ್ಯಕತೆಯನ್ನು ವ್ಯವಸ್ಥಿತಗೊಳಿಸಲು ಓದುವ ಕಲೆ ಮತ್ತು ಸಂಕೇತಗಳು ವಿದ್ಯಾರ್ಥಿಗಳಿಗೆ ನೆರವಾಗುವ ಸಾಧನಗಳಾಗಿ ಕಾರ್ಯ ನಿರ್ವಹಿಸಬಲ್ಲವು. ಅವರು ವ್ಯಾಖ್ಯಾನವನ್ನು ಅರ್ಥೈಸಿಕೊಳ್ಳಲು, ಎಲ್ಲಾ ಉತ್ತರಗಳೂ ಮೌಲಿಕವಾದವುಗಳು ಎಂದು ತಿಳಿದುಕೊಳ್ಳಲು ಕಲಿಯುತ್ತಾರೆ ಹಾಗೂ ತಮ್ಮ ಸಹಪಾಠಿಗಳ ಮಾತುಗಳನ್ನು ಆಲಿಸಲು ಕಲಿಯುತ್ತಾರೆ. ಅವರು, ಸಾಮಗ್ರಿ, ಬಣ್ಣ, ಆಕಾರ, ಗಾತ್ರ, ಕೇಂದ್ರ, ಕೇಂದ್ರ ಬಿಂದು, ಪರಿಧಿ, ತಂತ್ರ ಮುಂತಾದುವುಗಳ ಬಗ್ಗೆ ಲಕ್ಷ್ಯವಿಡಲು ಶುರು ಮಾಡುತ್ತಾರೆ; ಯಾವುದೇ ಲಕ್ಷ್ಯವನ್ನೂ ಅಲಕ್ಷಿಸುವಂತಿಲ್ಲ ಅಥವಾ ನಿರಾಕರಿಸುವಂತಿಲ್ಲ. ಉದಾಹರಣೆಗೆ, ಶಾಂತಿಯ ವಿವಿಧ ಸಂಕೇತಗಳಾದ - ☮, 🕊, ✌, 🌈. ಇವುಗಳನ್ನು ವಿವರಿಸುವಂತೆ ಶಿಕ್ಷಕಿ ವಿದ್ಯಾರ್ಥಿಗಳಿಗೆ ಹೇಳಬಹುದು. ಅವರು ಸುತ್ತಲೂ ನೆರೆಯುತ್ತಾರೆ, ಲಕ್ಷ್ಯವಿಡುತ್ತಾರೆ ಮತ್ತು ಅರ್ಥೈಸಿಕೊಳ್ಳುತ್ತಾರೆ, ಕೆಲವರು ಬಣ್ಣಗಳನ್ನು ಗುರುತಿಸಬಹುದು, ಕೆಲವರು ಆಕಾರಗಳನ್ನು ಗುರುತಿಸಬಹುದು, ಕೆಲವರು ಕಥೆಯನ್ನು ಹುಡುಕಬಹುದು, ಇನ್ನು ಕೆಲವರು ತಮಗೆ ಈಗಾಗಲೇ ಗೊತ್ತಿರುವ ಸಂಗತಿಗಳಿಗೆ ನಂಟು ಕಂಡುಕೊಳ್ಳಬಹುದು. ಈ ಚಟುವಟಿಕೆಯು ಪಿಡಿಸಿಯ ಆರಂಭಿಕ ಹಂತದಲ್ಲಿ, ವಿದ್ಯಾರ್ಥಿಗಳು ಸರಿಯೋ ಅಥವಾ ತಪ್ಪೋ ತಮ್ಮ ಅನಿಸಿಕೆಗಳನ್ನು ನಿರ್ಭಯವಾಗಿ ಹಂಚಿಕೊಳ್ಳಬಹುದು ಎಂಬುದನ್ನು ಅರ್ಥ ಮಾಡಿಸುತ್ತದೆ. ಅಲ್ಲಿ ಸರಿಯಾದ ಉತ್ತರ ಇಲ್ಲದೇ ಇರುವ ಕಾರಣ ಯಾವುದೇ ತೀರ್ಪುಗಳಿರುವುದಿಲ್ಲ.

ಅನುಭವಗಳಿಗೆ ಮಾನ್ಯತೆ ಮಕ್ಕಳಿಗೆ ಸಮಗ್ರವಾದ ವಾತಾವರಣ ಕಟ್ಟಿಕೊಡುವ ದೃಷ್ಟಿಯಿಂದ ತರಗತಿ ಕೊಠಡಿಗಳು ಸುರಕ್ಷಿತ ಮತ್ತು ಭಯಮುಕ್ತ ಸ್ಥಳಗಳಾಗಿರುವುದು ಅತ್ಯವಶ್ಯ. ಅಂತಹ ವಾತಾವರಣ ನಿರ್ಮಾಣ ಮಾಡುವಲ್ಲಿ ಇರುವ ಅನೇಕ ಮಾರ್ಗಗಳ ಪೈಕಿ ನಿಯತಕಾಲಿಕ ಸಂವಾದಾತ್ಮಕ ವೃತ್ತವೂ (Periodic Dialogic Circles) ಒಂದು. ಶಿಕ್ಷಕರು ತಮ್ಮ ತರಗತಿ ಕೊಠಡಿಗಳ ಸನ್ನಿವೇಶ / ಸಂದರ್ಭಕ್ಕೆ ಅನುಗುಣವಾಗಿ ಹೊಸಹೊಸ ಮಾರ್ಗಗಳನ್ನು ಕಂಡುಕೊಳ್ಳಬಹುದು. ಮಕ್ಕಳ ಮಾನಸಿಕ, ಭಾವನಾತ್ಮಕ ಮತ್ತು ದೈಹಿಕ ಸ್ವಾಸ್ಥ್ಯಕ್ಕೆ ಕೊಡುಗೆ ನೀಡಬಲ್ಲ ಮಾರ್ಗಗಳನ್ನು ಕಂಡುಕೊಳ್ಳುವುದೇ ಇಲ್ಲಿರುವ ಉಪಾಯ. ಅವ್ಯಕ್ತವಾಗಿರುವ ತಮ್ಮ ಭಾವನೆಗಳನ್ನು, ಅಭಿಪ್ರಾಯಗಳನ್ನು ಮುಕ್ತವಾಗಿ ಹಂಚಿಕೊಳ್ಳುವಂತೆ ಮಾಡುವುದು ಮತ್ತು ಇತರರದ್ದನ್ನು ಆಲಿಸುವಂತೆ ಮಾಡುವುದು, ಅವರ ಅನುಭವಗಳನ್ನು ಮಾನ್ಯ ಮಾಡುವುದು ಹಾಗೂ ಅವರಿಗೂ ಎಲ್ಲರೆದುರು ಮಾತನಾಡಲು ದನಿ ಇದೆ ಮತ್ತು ಜನರು ಕೇಳಿಸಿಕೊಳ್ಳುವಂತೆ ಮಾಡುವ ಶಕ್ತಿ ಇದೆ ಎಂಬುದನ್ನು ಅವರಿಗೆ ತಿಳಿಸುವುದು ಇಲ್ಲಿರುವ ಉಪಾಯವಾಗಿದೆ. ಇದು ಅವರ ವೈಯಕ್ತಿಕ ಅನುಭವಗಳು ಮತ್ತು ತಿಳುವಳಿಕೆಯ ಮೇಲೆ ನಂಬಿಕೆಯನ್ನೂ ತೋರಿಸುತ್ತದೆ; ಅವರು ನಿರಾತಂಕವಾಗಿ ಮತ್ತು ಸ್ವಂತ ಧ್ವನಿಯೊಂದಿಗೆ ತಾವು ಪ್ರತಿಪಾದಿಸಲು ಹೆದರುವುದಿಲ್ಲ ಎಂಬುದನ್ನೂ ಇದು ತೋರಿಸುತ್ತದೆ.

## ಪರಾಮರ್ಶನ


Arao, B., & Clemens, K. (2013). From Safe spaces to Brave Spaces. The Art of Effective Facilitation: Reflections from Social Justice Educators, 135, 150

Bohm, D., Factor, D., & Garrett, P. (1991). Dialogue: A Proposal

Bohm, D., Senge, P. M., & Nichol, L. (2004). On Dialogue. Routledge

Haynes, J. (2008). Children as Philosophers: Learning Through Enquiry and Dialogue in the Primary Classroom. Routledge

Leganger-Krogstad, H. (2014). From Dialogue to Trialogue: A Sociocultural Learning Perspective on Classroom Interaction. Journal for the Study of Religion, 27(1), 104-128

Rajendran, S., & Gade, S. (2018). Bhimrao Ambedkar: The Boy Who Asked Why. Kitaabworld, LLC





**ನೂಪುರ್ ರಸ್ತೋಗಿ** ಅವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಸಹಾಯಕ ಸಂಶೋಧಕಿಯಾಗಿದ್ದಾರೆ. ಅವರು ಸಂವಾದದಲ್ಲಿ, ಭ್ರಾತೃತ್ವ ಮತ್ತು ನ್ಯಾಯದ ಆಸಕ್ತಿ ಗುಂಪಿನ ಭಾಗವಾಗಿದ್ದಾರೆ. ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ಪಡೆಯುವುದಕ್ಕೂ ಮೊದಲು ಶಾಲೆಗಳಲ್ಲಿ ಬೋಧಿಸುತ್ತಿದ್ದರು. ಸಾಮಾಜಿಕ ನ್ಯಾಯ ಮತ್ತು ಅಧಿಕಾರದ ಅಂತರವಿಭಾಗದಲ್ಲಿ ಸಂವಾದಕ್ಕಾಗಿ ಬೋಧನಾ ವಿಧಾನವನ್ನು ಅರ್ಥೈಸಿಕೊಳ್ಳುವುದು ಮತ್ತು ಕಟ್ಟುವುದು ಅವರ ಸಂಶೋಧನಾ ಆಸಕ್ತಿಯ ವಿಷಯಗಳು. ಅವರನ್ನು nupur.rastogi@apu.edu.in ಮೂಲಕ ಸಂಪರ್ಕಿಸಬಹುದು.


ಅನುವಾದ: **ರೋಹಿಣಿ ಮುಂಡಾಜೆ** | ಪರಿಶೀಲನೆ: **ಲತಾ ಕೆ.ಸಿ.**